will take a long time. The question hour is meant only to elicit the information. I have called the next question. You have taken sufficient time.

Public Service Commission (Unit Officers.)

Q.—86. Sri H. K. SIDDAIYA (Belur—Scheduled Castes).—

Will the Government be pleased to state :—

(*a*) the number of Unit Offices for purposes of recruitment to Public Service in the State ;

(*b*) the names of such Unit Offices ;

(*c*) the total number of posts of I Division and II Division Clerks in each Unit and other posts, if any ;

(*d*) the total number of Depressed Class I Division and II Division Clerks in those Units ;

(*e*) whether 16 2/3 per cent reservation has been maintained in each Unit in the cadres of I and II Division Clerks and other appointments in all the Unit Offices in the State ?

A.—Sri Kadidal MANJAPPA (Minister for Revenue and Public Works).—

(*a*) and (*b*) 89, *vide* the Appendix below.

(*c*) Information is not readily available,

(*d*) The total number of Scheduled Caste candidates working in the Class II posts of the State as on 31st March 1953 are as follows :—

Class I Posts	...	186
Class II Posts	...	936

Separate figures for clerks unit-wise are not readily available.

(*e*) Instructions have been issued to all the Unit Officers to effect the Reservation of 16 2/3 per cent to Scheduled Castes and Scheduled Tribes.

List of Unit Officers.

1. The Chief Secretary to Government
2. The Secretary, Mysore Government Insurance Department
3. The Controller, State Accounts Department
4. The Revenue Commissioner in Mysore, Bangalore
5. Do (Treasury Cadre)
6. The Deputy Commissioner, Bangalore District, Bangalore.
7. Do Mysore
8. Do Tumkur
9. Do Kolar
10. Do Chitaldrug
11. Do Shimoga
12. Do Chikmagalur
13. Do Mandya
14. Do Hassan
15. Do Bellary
16. The Excise Commissioner.
17. The Registrar, High Court of Mysore
18. The District and Sessions Judge, Bangalore
19. Do Mysore
20. Do Shimoga
21. Do Civil Station

21(*a*) The District and Sessions Judge, Bellary

22. The Registrar, University of Mysore, Mysore
23. The Principal, S.K.S.J.T. Institute, Bangalore
24. The Principal, S.J.C. Institute, Bangalore
25. The Director of Technical Education in Mysore, Bangalore
26. The Registrar of Co-operative Societies

(SRI KADIDAL MANJAPPA.)

27. The Director of Public Instruction
28. The District Educational Officer, Bangalore District
29. Do City District, Bangalore
30. Do Mysore
31. Do Mandya
32. Do Tumkur
33. Do Kolar
34. Do Chitaldrug
35. Do Hassan
36. Do Shimoga
37. Do Chikmagalur
38. Do Bellary
39. The Inspectress of Schools, Civil Station, Bangalore
40. The Superintendent of Land Records, Survey and Settlement
41. The Director of Public Health
42. The Director of Industries and Commerce
43. The Director of Agriculture
44. The Director of Geology
45. The Inspector-General of Police
46. The Chief Conservator of Forests
47. The Inspector-General of Prisons
48. The Director of Medical Services
49. The Superintendent, Government Gardens, Bangalore
50. The Chief Electrical Engineer in Mysore, Bangalore
51. The Private Secretary to Rajpramukh
52. The Commissioner for Depressed Classes
53. The Labour Commissioner
54. The Commissioner, Corporation of the City of Bangalore
55. The Commissioner, Mysore City Municipality, Mysore
56. The Chairman, City Improvement Trust Board, Bangalore
57. The Chairman, City Improvement Trust Board, Mysore
58. The Director of Archæology
59. The Director of Animal Husbandry Services, Bangalore
60. The Commissioner for Economic Development and Planning
61. The Chief Marketing Officer
62. The Director of Food Supplies
63. The Controller of Civil Supplies
64. The Commissioner for Food Production
65. The Director of Sericulture
66. The Secretary, Mysore Legislature
67. The Secretary, Department of Indian Medicine
68. The Convener, Board of Management of Industrial Concerns, Bangalore
69. The Director, Mysore Iron and Steel Works, Bhadravati
70. The Commissioner of Stamps
71. The Inspector-General of Registration
72. The Registrar of Joint Stock Companies
73. The Director of Rural Industrialisation
74. The Commissioner for Local Self-Government
75. The General Manager, Mysore Government Road Transport Department
76. The Principal, Law College
77. The Principal, School of Engineering, Bangalore
78. The Principal, B. D. T. College of Engineering, Davangere
79. The Principal, Flying Training School, Jakkur
80. The Principal Information Officer
81. The Secretary, Beggar Relief Committee
82. The Director of Statistics

83. The Commissioner of Sales Tax
84. The Chief Engineer, P.W.D., Bangalore
85. The Superintending Engineer, Bangalore Circle
86. The Superintending Engineer Shimoga Circle
87. The Superintending Engineer, Cauvery Circle, Mysore
88. The Municipal Commissioner, Davangere City Municipality
89. The Secretary, Mysore Public Service Commission

ಶ್ರೀ ಎಚ್. ಕೆ. ಸಿದ್ದಯ್ಯ.—ಪರಿಶಿಷ್ಟದಲ್ಲಿ ಕೊಟ್ಟಿರುವ ಈ ಯೂನಿಟ್ ಆಫೀಸುಗಳಲ್ಲಿ ಹರಿಜನರಿಗೆ ಎಷ್ಟೆಷ್ಟು ಹುದ್ದೆಗಳನ್ನು ಮೀಸಲಾಗಿಟ್ಟಿದ್ದೀರೆಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಆಜ್ಞೆಯ ಪ್ರಕಾರ ಶೇಕಡ 16⅔ ಸ್ಥಾನಗಳನ್ನು ಮೀಸಲಾಗಿಡಲಾಗಿದೆ. ಆ ಪ್ರಕಾರ, ಕೆಲಸಗಳನ್ನು ಕೊಡುವಾಗ ಯೂನಿಟ್ ಆಫೀಸರುಗಳು ನಡೆದು ಕೊಳ್ಳಬೇಕೆಂದು ಯೂನಿಟ್ ಆಫೀಸರುಗಳಿಗೆ ಸೂಚನೆ ಕೊಡಲಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಪ್ರಶ್ನೆಯನ್ನು ಕೇಳಿರುವ ಉದ್ದೇಶ ಹಿಂದುಳಿದ ಪಂಗಡಗಳವರಿಗೆ ಕಾನೂನು ಪ್ರಕಾರ ಸ್ಥಾನಗಳು ಸಿಕ್ಕುತ್ತಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರಬೇಕೆಂಬುದೇ ಆಗಿದೆ. ಹೀಗಿರುವಲ್ಲಿ (c) ಪ್ರಶ್ನೆಗೆ ಉತ್ತರದಲ್ಲಿ, 'ವಿವರಗಳು ಸಿದ್ಧವಾಗಿ ದೊರೆಯುವಂತಿಲ್ಲ' ವೆಂದು ಹೇಳಿದ್ದೀರಿ. ಈ ವಿವರಗಳು ಸಿಕ್ಕುವುದು ಯಾವಾಗ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೆಲ್ಲಾ ಶೇಖರಿಸಿ ಹೇಳಬೇಕಾದರೆ ಬಹಳ ಕಾಲ ಬೇಕಾಗುತ್ತದೆ. ಪ್ರತಿಯೊಂದು ಯೂನಿಟ್ ಆಫೀಸಿನಲ್ಲಿಯೂ ಎಷ್ಟು ಸ್ಥಾನಗಳು ಖಾಲಿ ಇವೆ ಮುಂತಾದುವನ್ನೆಲ್ಲಾ ವಿಚಾರಿಸಿ ಹೇಳಬೇಕು.

ಶ್ರೀ ಎಚ್. ಕೆ. ಸಿದ್ದಯ್ಯ.—1953 ನೆಯ ಇಸವಿ ಮಾರ್ಚಿ ತಿಂಗಳಿನಲ್ಲಿ ನಿಯೋಜನೆಯಲ್ಲಿ II ನೆಯ ತರಗತಿಯ ಹುದ್ದೆಗಳು 936, I ನೆಯ ತರಗತಿಯ ಹುದ್ದೆಗಳು 186 ಎಂತಲೂ ತಿಳಿಸಿದ್ದೀರಿ. ಈ ಹುದ್ದೆಗಳು ಯಾವ ಯಾವವು ಎಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತಾವೇ ಕೇಳಿದ್ದೀರಲ್ಲಾ, first division ಕ್ಲಾರ್ಕುಗಳು, II division ಕ್ಲಾರ್ಕುಗಳು ಎಂದು.

ಶ್ರೀ ಎಚ್. ಕೆ. ಸಿದ್ದಯ್ಯ.—ಗುಮಾಸ್ತರುಗಳ ಸಂಬಂಧದಲ್ಲಿ ಯೂನಿಟ್‌ವಾರು ಲೆಕ್ಕ ಸಿದ್ಧವಾಗಿಲ್ಲವೆಂದು ಹೇಳಿದ್ದೀರಿ; ಯಾವಾಗ ಅದನ್ನು ಒದಗಿಸುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟು ಸುಲಭವಾಗಿ ಕೊಡುವುದು ಸಾಧ್ಯವಿದ್ದರೆ ಕೊಡುತ್ತಿದ್ದೆವು. ಈ ಹೊತ್ತು ಕೂಡ ಇದನ್ನೇ ವಿಚಾರಿಸಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಪ್ರತಿಯೊಂದು ಯೂನಿಟ್ಟಿಗೂ ಈ ಆಜ್ಞೆಯನ್ನು ತಿಳಿಸಿದ್ದೇವೆಂದು ಹೇಳಿದಿರಿ. ಈ ಬಗ್ಗೆ ಅಂಕಿ ಅಂಶಗಳನ್ನು ಯಾವಾಗ ತಿಳಿಸುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಶಃ ಇನ್ನೊಂದು ವರ್ಷದ ಆಖೈರ್ ಹೊತ್ತಿಗೆ ತಿಳಿಸಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಜವಾನರುಗಳು ಈ ಸಂಖ್ಯೆಯಲ್ಲಿ ಸೇರಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ನೌಕರಿಯಲ್ಲೂ ನಿರ್ದಿಷ್ಟವಾಗಿ ದಾಮಾಷಾ ಪ್ರಕಾರ ಕೊಡಬೇಕೆಂದು ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ಆಫೀಸುಗಳಲ್ಲಿ ಜವಾನರುಗಳ ಹುದ್ದೆಗಳು ಖಾಲಿ ಇದ್ದರೂ, ಅದಕ್ಕೆ ಅರ್ಜಿ ತೆಗೆದುಕೊಂಡು ಹೋದ ಹರಿಜನರಿಗೆ ಕೆಲಸ ವಿಲ್ಲವೆಂದು ಹೇಳಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಬಂದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಚೀಫ್ ಆಫೀಸರ್, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಖಾಲಿಯಿದ್ದೂ ನರಸಿಂಹಯ್ಯ ಎಂಬ ಹರಿಜನರು ಅರ್ಜಿ ಹಾಕಿಕೊಂಡರೂ ಕೆಲಸ ಇಲ್ಲ ಎಂದು ಹೇಳಿ ಕಳುಹಿಸಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

Mr. SPEAKER.—In the natural course of things, that cannot be within the knowledge of the Minister, unless you specifically bring it to his notice and call for information.

ಶ್ರೀ ಕೆ. ಪುಟ್ಟಸ್ವಾಮಿ.—ನರಸಿಂಹಯ್ಯ ಎಂಬ ಹರಿಜನರಿಗೆ 21-5-54 ರಲ್ಲಿ ಅಲ್ಲಿ ಎಂಟು ಸ್ಥಾನಗಳು ಖಾಲಿ ಇದ್ದರೂ ಖಾಲಿ ಸ್ಥಾನಗಳಿಲ್ಲವೆಂದು ಹೇಳಿ ಕಳುಹಿಸಿದ್ದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್.—ಸರ್ಕಾರಿ ಕೈಗಾರಿಕೆಗಳಲ್ಲೂ ಈ ನಿಯಮವನ್ನು ಅನ್ವಯಿಸುವುದಕ್ಕೆ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಇಲಾಖೆಗಳಿಗೂ ಅದು ಅನ್ವಯಿಸುತ್ತದೆಂದು ಹೇಳಿದ್ದೇನೆ.

ಶ್ರೀ ಜಿ. ದುಗ್ಗಪ್ಪ.—ಯೂನಿಟ್ ಆಫೀಸರುಗಳಿಗೆ instructions ಕೊಟ್ಟಿದ್ದೇವೆಂದು ಹೇಳಿದ್ದೀರಿ. ಯಾವಾಗ instructions ಕೊಟ್ಟಿರಿ?

Sri Kadidal MANJAPPA.—I don't remember the date.

Sri G. DUGGAPPA.—After having given instructions to the Unit Officers to reserve 16 2/3 per cent, whether the Government have received any information from that date onwards uptill now regarding the number of vacancies available or the persons appointed?

Sri Kadidal MANJAPPA.—It is too early to expect any return or report in that behalf.

Sri G. DUGGAPPA.—Do you mean to say that no Scheduled Caste persons have been appointed from that date onwards?

Sri Kadidal MANJAPPA.—I did not say that. I said that it is too early to expect.

Sri G. DUGGAPPA.—Will the Government call for any periodical reports from the Unit Officers?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ಈ ಬಗ್ಗೆ ವರದಿಗಳು ಬರುತ್ತವೆ. ಅದಕ್ಕೊ ೧ನ್ಕರಪೇ ಒಂದು ವರ್ಷ ಆದನಂತರ ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದ್ದು.

Sri K. PRABHAKAR.—May I know the officers to whom the returns of the Ministers' Establishments would be sent, Sir?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶಿಷ್ಟವನ್ನು ನೋಡಿ!

Appointment of Officials (implementation of Government Order requiring representation of all Communities.)

Q.—91. Sri H. K. SIDDAIYA (Belur-Scheduled Castes).—

Will the Government be pleased to state :—

(*a*) whether there is a Government Order requiring the representation of all communities while appointing officials in each office ;

(*b*) whether effect has been given to that Order in all offices ?

A.—Sri Kadidal MANJAPPA (Minister for Revenue and Public Works).—

(*a*) Government Order No. G. 4227-8—G M. 103-33-1, dated 20th December 1933 wherein Government impressed on all appointing officers the need for a fair admixture of different communities when appointments are made.

(*b*) This order is being given effect to while filling up vacancies that arise in each office according to the ratio of 3 Special to 1 General. The Government Order of 1934 and subsequent orders laying down the revised rules of recruitment have repeatedly laid stress on the principle of giving representation in Government services in all units to all the communities specially to the Backward and unrepresented communities.

Due reservation has also been made in Government Order of August 1953 to the extent of 16 2/3 per cent of all direct recruitment vacancies to Scheduled Castes and Scheduled Tribes.

ಶ್ರೀ ಎಚ್. ಕೆ. ಸಿದ್ದಯ್ಯ.—ಹಿಂದುಳಿದ ವಂಗಡದ ವರಿಗೆ ಶೇಕಡ 16⅔ರಷ್ಟು ಮೀಸಲಾಗಿಟ್ಟಿದ್ದೇವೆಂದು ಹೇಳಿದಿರಿ. ಈ ಆಜ್ಞೆ ನಮರ್ಪಕವಾಗಿಲ್ಲವೆಂದು ಹೇಳಿದರೆ ತಾವು ಒಪ್ಪುತ್ತಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಹೇಗೆ ಒಪ್ಪುವುದ ಕ್ಕಾಗುತ್ತದೆ!

Mr. SPEAKER.—It is a matter of opinion.

ಶ್ರೀ ಎಂ. ಮಾದಯ್ಯ.—ತಾವು ಯೂನಿಟ್ ಆ೭ೀ ನರುಗಳಿಗೆ instructions ಕೊಟ್ಟಿರುವ್ದಾಗಿ ಹೇಳಿದಿರಿ. ಅವರು ಶೇಕಡಾವಾರು ಪ್ರಕಾರ ಎಷ್ಟೆಷ್ಟು ಜನರನ್ನು ನೇಮಿಸಿಕೊಂಡಿದ್ದಾರೆಂಬ ಬಗ್ಗೆ periodical report ಕಳುಹಿಸುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದ್ದೇನೆ.

ಶ್ರೀ ಎಂ. ಮಾದಯ್ಯ.—ತಾವು ಡಿಪ್ರೆಸ್ಡ್ ಕ್ಲಾಸ್ ಮತ್ತು ಇತರ ಎಲ್ಲಾ ಕೋಮಿನವರಿಗೂ 1 : 3 ದಾಮಾಷಾದಲ್ಲಿ ಹುದ್ದೆಗಳನ್ನು ಕೊಡುವಂತೆ ಆರ್ಡರ್ ಮಾಡಿದ್ದೇವೆ, ಅದರಂತೆ ಕೊಡುತ್ತಿ ದ್ದಾರೆಂದು ಹೇಳಿದ್ದೀರಿ. ಅದಲ್ಲದೆ, ಈ ಆರ್ಡರಿನ ಪ್ರಕಾರ ಶೇಕಡ 16⅔ ರಿನರ್ವೇಷ್ಷ ಇರಬೇಕೆಂದು ಹೇಳಿದೆಯಲ್ಲಾ, ಇದನ್ನೆಲ್ಲಾ ಲೆಕ್ಕ ಹಾಕುವಾಗ, total number of appointments ಮೇಲೆ ಲೆಕ್ಕ ಹಾಕುತ್ತಾರೆಯೇ ಅಥವಾ 1 : 3 ಎಂದು backward ಕ್ಲಾಸ್‌ಗೆ ಕೊಟ್ಟಿರುವುದರಮೇಲೆ ಲೆಕ್ಕ ಹಾಕುತ್ತಾರೆಯೇ?

Sri Kadidal MANJAPPA.—Out of every 12 vacancies available, 3 shall be regarded as 'A' or general, 7 as 'B' or special and the remaining two as 'C' or reserved.

ಶ್ರೀ ಎಂ. ಮಾದಯ್ಯ.—ಎರಡು ಎನ್ನುವುದನ್ನು total number ಮೇಲೆ calculate ಮಾಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ. ಇವರಿಗೆ 16⅔ ಭಾಗ ಬರುವಂತೆ P. S. C. ಯವರು calculate ಮಾಡಿದ್ದಾರೆ.

ಶ್ರೀ ಎಂ. ಮಾದಯ್ಯ.—16⅔ ಭಾಗ ಎಂದು ಗೊತ್ತುಮಾಡಿದ್ದು ಯಾವ ಆಧಾರದ ಮೇಲೆ?

Sri Kadidal MANJAPPA.—On the basis of the population.

ಶ್ರೀ ಎಂ. ಮಾದಯ್ಯ.—ಈಗ Depressed Class ನವರ ಜನಸಂಖ್ಯೆ ಶೇಕಡ 20 ಇದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರವೂ ನರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಂ. ಮಾದಯ್ಯ.—ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು inadequate ಪ್ರಾತಿನಿಧ್ಯವುಳ್ಳ ಮತ್ತು unrepresented ಆಗಿರತಕ್ಕ ಕೋಮಿನವರಿಗೂ ಒಂದು ಶೇಕಡ ಭಾಗವನ್ನು ನಿಗದಿ ಮಾಡಬೇಕೆಂದು ಹೇಳಿದ ಶಿಫಾರನು ಪರ್ಯಾಲೋಚನೆಯಲ್ಲಿದೆಯೆಂದು ಅಸೆಂಬ್ಲಿಯಲ್ಲಿ ಹೇಳಿದ್ದಿರಲ್ಲಾ, ಅದರ ಬಗ್ಗೆ ಏನಾದರೂ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—Backward Classes Commissionನಿನವರ ವರದಿಯನ್ನು ನಿರೀಕ್ಷಿನುತ್ತಿದ್ದೇವೆ.